ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂಖ್ಯೆ:ಬಿಸಿಯು/ಎಸ್‌ವೈಎನ್/ಅಸಾಮಾನ್ಯ ಸಭೆ/22 /2023-24 ದಿನಾಂಕ: 26.05.2023.

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು-560001

ಮಾನ್ಯರೆ,

ವಿಷಯ: ದಿನಾಂಕ: 23.05.2023 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳು.

****

ದಿನಾಂಕ: 23.05.2023 ರಂದು ಅಪರಾಹ್ನ 03.00 ಗಂಟೆಗೆ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬೆಂ.ನ.ವಿ.

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬಿಸಿಯು/ಎಸ್‌ವೈಎನ್/ಅಸಾಮಾನ್ಯ ಸಭೆ/22/2023-24 ದಿನಾಂಕ: 26.05.2023.

ದಿನಾಂಕ 23.05.2023 ರಂದು ಅಪರಾಹ್ನ 03.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಡಾ. ಎಂ. ಮುನಿರಾಜು | ಸದಸ್ಯರು |
| 3. | ಶ್ರೀ ಎಂ. ವಿ. ರಂಗಪ್ಪ | ಸದಸ್ಯರು |
| 4. | ಶ್ರೀ. ಸಮರ್ಥ ಮುನಿರಾಜು | ಸದಸ್ಯರು |
| 5. | ಪ್ರೊ. ಕೆ. ಎಂ. ಮಹೇಶ್ | ಸದಸ್ಯರು |
| 6. | ಶ್ರೀ ಸತೀಶ್ ಎಂ. | ಸದಸ್ಯರು |
| 7. | ಡಾ. ಮೊಹಮ್ಮದ್ ಸುಹೇಲ್ ಇಕ್ಬಾಲ್ | ಸದಸ್ಯರು |
| 8. | ಡಾ. ಎಸ್.ಎನ್.ವೆಂಕಟೇಶ್ | ಸದಸ್ಯರು |
| 9. | ಪ್ರೊ. ಎಸ್. ಹರಿಪ್ರಸಾದ್ | ಸದಸ್ಯರು |
| 10. | ಡಾ. ವಿ. ಲೋಕೇಶ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 11. | ಶ್ರೀ ಸಿ ಎನ್ ಶ್ರೀಧರ, ಕೆ.ಎ.ಎಸ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಕುಲಸಚಿವರು, ಸಭಾಧ್ಯಕ್ಷರಾದ ಕುಲಪತಿಗಳಿಗೆ ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಸದಸ್ಯರಿಗೆ ಸ್ವಾಗತವನ್ನು ಕೋರಿ, ಪ್ರಾಸ್ತಾವಿಕವಾಗಿ ಮಾತನಾಡಿ ಸಭೆಗೆ ಚಾಲನೆ ನೀಡಲು ಸಭಾಧ್ಯಕ್ಷರನ್ನು ವಿನಂತಿಸಿದರು.

ಸಭಾಧ್ಯಕ್ಷರು ಎಲ್ಲ ಸದಸ್ಯರನ್ನು ಅಭಿವಂದಿಸಿ, ಕಳೆದ ಸಿಂಡಿಕೇಟ್ ಸಭೆಯಿಂದ ಇಲ್ಲಿಯವರೆಗೆ ವಿಶ್ವವಿದ್ಯಾನಿಲಯದಲ್ಲಿ ಜರುಗಿವ ವಿವಿಧ ಪ್ರಮುಖ ಚಟುವಟಿಕೆಗಳ ಕುರಿತು ಪ್ರಸ್ತಾಪಿಸಿದರು.

1. **ಕುಮಾರಿ. ಪ್ರಿಯ ಮೋಹನ್ ರವರು** ಜಾರ್ಖಂಡ ರಾಜ್ಯದ ರಾಂಚಿಯಲ್ಲಿ ಜರುಗಿದ **26th National Federation Cup Senior Athletic Campionship** ಅರ್ಹತಾ ಸುತ್ತಿನಲ್ಲಿ ಜಯ ಗಳಿಸಿ **12-16** ಜೂನ್, 2023 ರಂದು ಜರುಗುವ ಏಷಿಯನ್ ಕ್ರೀಡಾ ಕೂಟದಲ್ಲಿ 400 ಮೀಟರ್ ಓಟದ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗಿರುತ್ತಾರೆ.

2. ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯಗಳ ಸ್ಪರ್ಧೆಗಳಲ್ಲಿ (i) **ಹಾಕಿ ಪುರುಷರ ತಂಡ (5-S)** ಕರ್ಪಾಗಮ್ ವಿಶ್ವವಿದ್ಯಾನಿಲಯ, ಕೋಯಂಬತ್ತೂರುನಲ್ಲಿ ದಿನಾಂಕ 7–9 ಏಪ್ರಿಲ್ 2023 ರಂದು ಜರುಗಿದ ಪಂದ್ಯದಲ್ಲಿ **ದ್ವಿತೀಯ ಸ್ಥಾನಗಳಿಸಿ ಬೆಳ್ಳಿಯ ಪದಕವನ್ನು**, (ii) **ಅಮೆರಿಕನ್ ಫುಟ್ ಬಾಲ್ ಮಹಿಳಾ ತಂಡ** ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯ ಆಯೋಜಿಸಿದ ಪಂದ್ಯದಲ್ಲಿ **ತೃತೀಯ ಸ್ಥಾನ ಗಳಿಸಿ ಕಂಚಿನ ಪದಕ** ಪಡೆದಿರುತ್ತಾರೆ.

3. **ಉತ್ತರ ಪ್ರದೇಶದ ಲಖನೌ ನಗರದಲ್ಲಿ ದಿನಾಂಕ 25.05.2023 ರಿಂದ** ಪ್ರಾರಂಭವಾಗುವ ಖೇಲೋ ಇಂಡಿಯಾ ವಿಶ್ವವಿದ್ಯಾಲಯಗಳ ಪಂದ್ಯಾಟದಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ **ಪುರಷರ ಹಾಕಿ ತಂಡ, ಈಜೂ ಹಾಗೂ ವೇಟ್ ಲಿಫ್ಟಿಂಗ್ ಸ್ಪರ್ಧೆಗಳಲ್ಲಿ ಭಾಗವಹಿಸುವ ಪುರುಷ ಕ್ರೀಡಾ ಪಟುಗಳು ಮತ್ತು ಷೂಟಿಂಗ್ ಸ್ಪರ್ಧೆಯಲ್ಲಿ** ಪಾಲ್ಗೂಳ್ಳಲು ಮಹಿಳಾ ಕ್ರೀಡಾ ಪಟುಗಳು ತೆರಳಿದ್ದಾರೆ.

   ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕ್ರೀಡಾ ಪಟುಗಳು ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ಪದಕಗಳನ್ನು ಗೆದ್ದು ವಿಶ್ವವಿದ್ಯಾನಿಲಯದ ಕೀರ್ತಿ ಹಾಗೂ ಗೌರವವನ್ನು ಹೆಚ್ಚಿಸಿದ್ದಾರೆ ಎಂದು ಹೇಳಿದರು.

4. ವಿಧಾನ ಸಭೆಯ ಸಾರ್ವತ್ರಿಕ ಚುನಾವಣೆಯ ಹಿನ್ನೆಲೆಯಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದು, 15.5.2023ಕ್ಕೆ ಮುಕ್ತಾಯವಾಗಿರುತ್ತದೆ. ರಾಜ್ಯದಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು, ವಿಶ್ವವಿದ್ಯಾನಿಲಯದ ಪರವಾಗಿ ನೂತನ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುವುದಾಗಿ ತಿಳಿಸಿದರು.

5. 2023-24ನೇ ಸಾಲಿನ ಸ್ನಾತಕೋತ್ತರ ವ್ಯಾಸಂಗಕ್ಕೆ ಪ್ರವೇಶದ ವೇಳಾಪಟ್ಟಿ ಪ್ರಕಟಿಸಲಾಗಿದೆ. ಅದರಂತೆ, ವಿಶ್ವವಿದ್ಯಾನಿಲಯದ ಮತ್ತು ಘಟಕ ಮಹಿಳಾ ಮಹಾವಿದ್ಯಾಲಯದ ಸ್ನಾತಕ ವ್ಯಾಸಂಗಗಳ ಪ್ರವೇಶಕ್ಕೆ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಪ್ರವೇಶಕ್ಕೆ ಆಸಕ್ತಿ ತೋರಿಸಿ ಅರ್ಜಿಸಲ್ಲಿಸುತ್ತಿದ್ದಾರೆ.

6. 2023-24ನೇ ಸಾಲಿನ ಹೊಸ ಹಾಗೂ ಮುಂದುವರಿಕೆ ಸಂಯೋಜನೆಗಾಗಿ ಅರ್ಜಿಗಳನ್ನು ಅಹ್ವಾನಿಸಲಾಗಿದ್ದು, ರಾಜ್ಯ ಸರ್ಕಾರದ ಯು.ಯು.ಸಿ.ಎಂ.ಎಸ್. ಪೋರ್ಟಲ್ ನಲ್ಲಿ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಸ್ಥಳೀಯ ವಿಚಾರಣಾ ಸಮಿತಿ ಒಳಗೊಂಡಂತೆ ಮುಂದಿನ ಎಲ್ಲ ಪ್ರಕ್ರಿಯೆಯನ್ನು ಅದೇ ಪೋರ್ಟಲ್ ನಲ್ಲಿ ನಿರ್ವಹಿಸಬೇಕಾಗಿದೆ.

7. ಬ್ರಿಟಿಷ್ ಕೌನ್ಸಿಲ್ ಪ್ರಾಯೋಜಕತ್ವದಲ್ಲಿ, ಉನ್ನತ ಶಿಕ್ಷಣ ಪರಿಷತ್ತಿನ "Furthering Higher Education Partnership: UK and Karnataka" ಕಾರ್ಯಕ್ರಮದ ಭಾಗವಾಗಿ, ಯು.ಕೆ. ದೇಶದ ವಿಶ್ವವಿದ್ಯಾನಿಲಯಗಳ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ, ಶಿಕ್ಷಣ ವ್ಯವಸ್ಥೆ, ಶೈಕ್ಷಣಿಕ ಆಡಳಿತ,

ಸಂಶೋಧನೆ, ವಿದ್ಯಾರ್ಥಿ ಕೇಂದ್ರಿತ ಸೌಕರ್ಯಗಳು, ಪಠ್ಯಕ್ರಮ, ಪಠ್ಯೇತರ ಚಟುವಟಿಕೆಗಳು ಇತ್ಯಾದಿಗಳ ಕುರಿತು ಅಧ್ಯಯನಕ್ಕಾಗಿ ಉನ್ನತ ಶಿಕ್ಷಣ ಪರಿಷತ್ತಿನಿಂದ ರಚಿತವಾದ ಕರ್ನಾಟಕ ರಾಜ್ಯ ನಿಯೋಗದ ಸದಸ್ಯರಾಗಿ ಯು.ಕೆ. ದೇಶದ ವಿಶ್ವವಿದ್ಯಾಲಯಗಳ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಲು ಆಯ್ಕೆಯಾಗಿದ್ದು, ದಿನಾಂಕ 28.5.2023 ರಿಂದ 8.6.2023ರ ವರೆಗೆ ಪ್ರವಾಸ ಕಾರ್ಯಕ್ರಮ ಆಯೋಜಿಸಲಾಗಿದೆ.

8. ದಿನಾಂಕ 15.03.2023ರಂದು ಎನ್.ಎಸ್.ಎಸ್. ರಾಷ್ಟ್ರೀಯ ಭಾವೈಕ್ಯತಾ ಶಿಬಿರವನ್ನು ಉದ್ಘಾಟಿಸಲಾಯಿತು.

9. ವಿಶ್ವವಿದ್ಯಾನಿಲಯದಲ್ಲಿ ಮರುನಿರ್ಮಾಣಗೊಂಡ ವಿವಿಧ ಐತಿಹಾಸಿಕ ಕಟ್ಟಡಗಳ ಲೋಕಾರ್ಪಣೆ ಕಾರ್ಯಕ್ರಮ ದಿನಾಂಕ: 23.3.2023 ರಂದು ರಾಜ್ಯದ ಮುಖ್ಯಮಂತ್ರಿಗಳಾಗಿದ್ದ, ಸನ್ಮಾನ್ಯ ಶ್ರೀ ಬಸವರಾಜ್ ಬೊಮ್ಮಾಯಿಯವರು, ಅಂದಿನ ಉನ್ನತ ಶಿಕ್ಷಣ ಸಚಿವರಾಗಿದ್ದ ಡಾ. ಸಿ.ಎನ್. ಅಶ್ವಥನಾರಾಯಣರವರ ಅಧ್ಯಕ್ಷತೆಯಲ್ಲಿ ಸಾಕಾರಗೊಂಡಿತು.

10. ದಿನಾಂಕ 28.03.2023 ರಂದು ಮಹಿಳಾ ದಿನಾಚರಣೆ ಹಾಗೂ ದಿನಾಂಕ 14.04.2023 ರಂದು ಡಾ. ಬಿ. ಆರ್.ಅಂಬೇಡ್ಕರ ರವರ ಜನ್ಮ ದಿನಾಚರಣೆ ರಾಷ್ಟ್ರೀಯ ಹಬ್ಬಗಳನ್ನು ಆಚರಿಸಲಾಯಿತು.

11. ಭಾರತ ಸರ್ಕಾರದ ವಿದೇಶಾಂಗ ಇಲಾಖೆಯ ಸಲಹೆಗಾರರಾದ ಪ್ರೊ. ಅಶೋಕ ಕುಮಾರ್ ಚಾವ್ಲಾರವರು ದಿನಾಂಕ 29.03.2023 ರಂದು ವಿಶ್ವವಿದ್ಯಾನಿಲಯಕ್ಕೆ ಆಗಮಿಸಿ, ಜಪಾನ್ ಭಾಷೆಯ ವ್ಯಾಸಂಗಗಳನ್ನು ಪ್ರಾರಂಭಿಸುವ ಕುರಿತು ಹಾಗೂ ಶಿಕ್ಷಕರನ್ನು ಒದಗಿಸುವ ಕುರಿತು ಚರ್ಚಿಸಿದರು.

12. 07.4.2023 ಮತ್ತು 21.4.2023 ರಂದು ಆಮಸ್ಟರ್‌ಡ್ಯಾಮ್ ವಿಶ್ವವಿದ್ಯಾಲಯ ಹಾಗೂ ಪೆನ್‌ಸಿಲ್ವೇನಿಯಾ ವಿಶ್ವವಿದ್ಯಾಲಯಗಳ ಪ್ರತಿನಿಧಿಗಳೊಂದಿಗೆ ಆನ್‌ಲೈನ್‌ನಲ್ಲಿ ಶೈಕ್ಷಣಿಕ ಸಹಯೋಗ ಕುರಿತು ಚರ್ಚಿಸಲಾಯಿತು.

13. ದಿನಾಂಕ 05.05.2023 ರಂದು ಚುನಾವಣಾ ಆಯೋಗದ ಸಹಯೋಗದೊಂದಿಗೆ ಮತದಾರರ ಜಾಗೃತಿ ಸಮಾವೇಶ ಜರುಗಿಸಲಾಯಿತು. ಸಂಯೋಜಿತ ಮಹಾವಿದ್ಯಾಲಯಗಳ ಸುಮಾರು ಎರಡು ಸಾವಿರ ವಿದ್ಯಾರ್ಥಿಗಳು ಭಾಗವಹಿಸಿದರು.

14. 22.05.2023 ನ್ಯಾಕ್ ಆಯೋಜಿಸಿದ ಮೌಲ್ಯಮಾಪಕರ ಓರಿಯಂಟೇಶನ್ ಆನ್‌ಲೈನ್ ಕಾರ್ಯಕ್ರಮದಲ್ಲಿ ಕುಲಪತಿಗಳು ಭಾಗವಹಿಸಿದರು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲು ಕುಲಸಚಿವರಿಗೆ ಸೂಚಿಸಿದರು.

******

**ವಿಷಯ ಸಂಖ್ಯೆ: 01**

ವಿಷಯ ಬ್ರಿಟಿಷ್ ಕೌನ್ಸಿಲ್ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಗಳ ಒಪ್ಪಂದದ ಪ್ರಕಾರ "Leadership Development Programme" ("ನಾಯಕತ್ವ ವಿಕಸನ ಕಾರ್ಯಕ್ರಮ") ಸಂಬಂಧಿಸಿದಂತೆ ದಿನಾಂಕ 28.05.2023 ರಿಂದ 08.06.2023 ರ ವರೆಗೆ ಕರ್ನಾಟಕ ರಾಜ್ಯದ ನಿಯೋಗದ ಸದಸ್ಯರಾಗಿ ಮಾನ್ಯ ಕುಲಪತಿಗಳು ಯು.ಕೆ. ದೇಶದ ವಿಶ್ವವಿದ್ಯಾಲಯಗಳಿಗೆ ಹಾಗೂ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡುವ ಕುರಿತು.

*ಪರಾಮರ್ಶಕ ಟಿಪ್ಪಣಿ:*

ದಿನಾಂಕ 15.03.20223 ರಂದು ಜರುಗಿದ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ. 11 ರಲ್ಲಿ ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಒಡಂಬಡಿಕೆಯ ವಿಷಯ ಹಾಗೂ ಯು.ಕೆ ದೇಶದ ವಿಶ್ವವಿದ್ಯಾಲಯಗಳು ಒಳಗೊಂಡಂತೆ ವಿದೇಶಿ ವಿಶ್ವವಿದ್ಯಾಲಯಗಳಿಗೆ ಕುಲಪತಿಗಳು ಭೇಟಿ ನೀಡಲು ಅನುಮೋದನೆ ನೀಡಲಾಗಿರುತ್ತದೆ. ಈ ಕುರಿತು ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಪರಿಷತ್ ಹಾಗೂ ಬ್ರಿಟಿಷ್ ಕೌನ್ಸಿಲ್‌ಗಳು ಮಾಡಿಕೊಂಡ ಒಡಂಬಡಿಕೆಗಳ ಅಡಿಯಲ್ಲಿ "Furthering Higher Education Partnership: UK and Karnataka" ಕಾರ್ಯಕ್ರಮದ ಅಂಗವಾಗಿ ಕರ್ನಾಟಕ ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳಿಗೆ ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ಶೈಕ್ಷಣಿಕ ಸಹಯೋಗ ಹೊಂದಲು ಉನ್ನತ ಶಿಕ್ಷಣ ಪರಿಷತ್ ವತಿಯಿಂದ ಹಲವಾರು ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ "Leadership Development Programme" ("ನಾಯಕತ್ವ ವಿಕಸನ ಕಾರ್ಯಕ್ರಮ") ಆಯೋಜಿಸಿದ್ದು ಇದರ ಪ್ರಮುಖ ಉದ್ದೇಶಗಳು ಕೆಳಗಿನಂತಿವೆ:

- Understanding the UK Universities Governance Structure and Compliances.
- Explore new Strategies and Innovations for Internationalization.
- Get an insight on processes, tools and skills required to offer educational quality at scale.
- Understanding the designing, delivery and assessment structure for academic programmes.

ಉನ್ನತ ಶಿಕ್ಷಣ ಮತ್ತು ಸಂಶೋಧನೆಯಲ್ಲಿ ಯು.ಕೆ. ವಿಶ್ವವಿದ್ಯಾಲಯಗಳೊಂದಿಗೆ ಸಹಯೋಗ ಕುರಿತಂತೆ ಹಲವಾರು ಸುತ್ತಿನ ಮಾತುಕತೆ, ದುಂಡು ಮೇಜಿನ ಚರ್ಚೆ, ಆನ್ ಲೈನ್ ವರ್ಚುವಲ್ ಸಭೆಗಳು ಜರುಗಿಸಿ **ಯು.ಕೆ. ದೇಶದ ನಾಲ್ಕು ವಿಶ್ವವಿದ್ಯಾನಿಲಯಗಳಾದ University of Highlands and Islands, Edge Hill University, University of Bath, Birmhingham** City **University** ಗಳೊಂದಿಗೆ ಶೈಕ್ಷಣಿಕ ಸಹಯೋಗ/ ಸಂಶೋಧನೆ ಹಾಗೂ Faculty Development Programme ಇತ್ಯಾದಿಗಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ರೂಪಿಸಲು ರಾಜ್ಯದಿಂದ ಬೆಂಗಳೂರು ನಗರ ವಿಶ್ವವಿದ್ಯಾನಿಲಯವು ಒಳಗೊಂಡಂತೆ ಒಟ್ಟು ನಾಲ್ಕು ವಿಶ್ವವಿದ್ಯಾನಿಲಯಗಳು ಆಯ್ಕೆಯಾಗಿರುತ್ತವೆ. ಬೆಂಗಳೂರು ನಗರ ವಿಶ್ವವಿದ್ಯಾನಿಲಯವು **Birmhingham City University,** ಹಾಗೂ **University of Bath** ಎರಡು ವಿಶ್ವವಿದ್ಯಾಲಯಗಳೊಂದಿಗೆ ಶೈಕ್ಷಣಿಕ / ಸಂಶೋಧನಾ ಸಹಯೋಗಕ್ಕಾಗಿ ಆಯ್ಕೆಗೊಂಡಿರುವುದು ಹೆಮ್ಮೆ ಹಾಗೂ ಅಭಿಮಾನದ ಸಂಗತಿ. ಈ ಪ್ರಕ್ರಿಯೆಯ ಫಲಿತಾಂಶವಾಗಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಎಂ.ಬಿ.ಎ. ವಿಭಾಗವನ್ನು "NET CARBON ZERO HUB" ಯೋಜನೆಗಾಗಿ ಬರ್ಮಿಂಗ್ ಹ್ಯಾಮ್ ನಗರ ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಕಾರ್ಯರೂಪದಲ್ಲಿ ತರಲು ಅನುಮೋದನೆ ದೊರೆತಿದ್ದು, ಇದು 01.03.2023 ರಿಂದ 31.12.2023 ರ ಅವಧಿಗೆ ಜಾರಿಯಲ್ಲಿರುತ್ತದೆ. ಇದಕ್ಕಾಗಿ ಒಟ್ಟು ಒಟ್ಟು 30,000/–ಬ್ರಿಟಿಷ್ ಪೌಂಡ್ (ಜಿಬಿಪಿ) ಅನುದಾನ ಮಂಜೂರಾಗಿದ್ದು ಬೆಂಗಳೂರು ನಗರ ವಿಶ್ವವಿದ್ಯಾನಿಲಯ 10,000 ಪೌಂಡಗಳ ಹೊಂದಾಣಿಕೆ ಅನುದಾನ ಒಳಗೊಂಡಿರುತ್ತದೆ. ಈ ಯೋಜನೆ ಪ್ರಗತಿಯಲ್ಲಿದೆ. ಇದಲ್ಲದೆ **University of Bath** ಜೊತೆಗೆ ಕ್ರೀಡಾ ವಿಜ್ಞಾನಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಕ್ರೀಡಾ ವಿಭಾಗದೊಂದಿಗೆ ಒಪ್ಪಂದ ಮಾಡಿಕೊಂಡು ಕ್ರೀಡೆಗಳಿಗೆ ಸಂಬಂಧಿಸಿದಂತೆ ಪರಸ್ಪರ ಕಾರ್ಯಕ್ರಮಗಳನ್ನು ಯೋಜಿಸಲು ಸಹಮತ ವ್ಯಕ್ತಪಡಿಸಲಾಗಿದೆ. ವಿಶ್ವವಿದ್ಯಾನಿಲಯದ ಕ್ರೀಡಾ ಸಮುಚ್ಚಯ ಸಿದ್ಧವಾದ ನಂತರ ಈ ಚಟುವಟಿಕೆಗಳಿಗೆ ಅಂತಿಮ ರೂಪ ನೀಡಿ ಕಾರ್ಯ ರೂಪದಲ್ಲಿ ತರಲು ಪ್ರಯತ್ನಿಸಲಾಗುವುದು.

ಮೇಲಿನ ಒಡಂಬಡಿಕೆ ಹಾಗೂ "Leadership Development Programme" ("ನಾಯಕತ್ವ ವಿಕಸನ ಕಾರ್ಯಕ್ರಮ") ಭಾಗವಾಗಿ, ಯು.ಕೆ. ದೇಶದ ಕೆಳಕಂಡ ಐದು ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಲು ಕರ್ನಾಟಕ ರಾಜ್ಯದ ನಿಯೋಗದ ಸದಸ್ಯರಾಗಿ ಮಾನ್ಯ ಕುಲಪತಿಗಳು ಆಯ್ಕೆಯಾಗಿದ್ದು, ಸದರಿ ನಿಯೋಗ ಯು.ಕೆ. ದೇಶದ ವಿಶ್ವವಿದ್ಯಾಲಯಗಳಿಗೆ ಹಾಗೂ ಶಿಕ್ಷಣ ಸಂಸ್ಥೆಗಳಿಗೆ ದಿನಾಂಕ 28.05.2023 ರಿಂದ 08.06.2023 ರ ವರೆಗೆ ಭೇಟಿ ನೀಡುವ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಅಂತಿಮಗೊಳಿಸಿರುತ್ತದೆ.

1. University of Highlands and Islands,
2. University of Leeds,
3. University of Bradford,
4. Birmhingham City University,
5. Cardiff University.

ಈ ಭೇಟಿಯ ಸಂದರ್ಭದಲ್ಲಿ ಯು.ಕೆ. ವಿಶ್ವವಿದ್ಯಾಲಯಗಳ, ಆದಳಿತ, ಶೈಕ್ಷಣಿಕ ವ್ಯಾಸಂಗಳಲ್ಲಿ ಸಹಯೋಗ, ಪಠ್ಯಕ್ರಮ ರಚನೆ ಹಾಗೂ ನಿರ್ವಹಣೆ, ಮೌಲ್ಯಮಾಪನದ ವಿಧಾನಗಳು, ಆಡಳಿತದಲ್ಲಿ ತಂತ್ರಜ್ಞಾನದ ಬಳಕೆ, ಉನ್ನತ ಶಿಕ್ಷಣದ ಅಂತರರಾಷ್ಟ್ರೀಕರಣ, ಉದ್ಯಮಗಳೊಂದಿಗೆ ಸಹಯೋಗದ ವಿಧಿವಿಧಾನ, ವಿದ್ಯಾರ್ಥಿ ಕೇಂದ್ರಿತ ಸೇವೆಗಳು, ವಿದ್ಯಾರ್ಥಿಗಳನ್ನು ಉದ್ಯೋಗಕ್ಕೆ ಅರ್ಹಗೊಳಿಸುವುದು, ಶಿಕ್ಷಕರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಸಂಶೋಧನೆಯ ಸಂಸ್ಕಾರ ವೃದ್ಧಿಗೊಳಿಸುವುದು, ಆರ್ಥಿಕ/ಹಣಕಾಸು ನಿರ್ವಹಣೆ ಮತ್ತು ಸಮರ್ಥನೀಯತೆ, ಹಾಗೂ ಯು.ಕೆ. ವಿಶ್ವವಿದ್ಯಾಲಯಗಳೊಂದಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಶೈಕ್ಷಣಿಕ ಸಹಯೋಗ ಹೊಂದಲು ಸಾಧ್ಯತೆ ಇರುವ ವಿವಿಧ ವಿಷಯಗಳ ಕುರಿತು ಚರ್ಚಿಸಲಾಗುವದು. ಈ ಪ್ರಯಾಣದ ಖರ್ಚು ವೆಚ್ಚಗಳಲ್ಲಿ ವಿಮಾನಯಾನದ ದರ, ವಿಸಾ ಪಡೆಯಲು ತಗಲುವ ವೆಚ್ಚ ಹಾಗೂ ಸ್ಥಳೀಯ ಸಾರಿಗೆ ವ್ಯವಸ್ಥೆ ಕುರಿತಂತೆ ಬ್ರಿಟಿಷ್ ಕೌನ್ಸಿಲ್ ಭರಿಸುತ್ತದೆ. ಉಳಿದಂತೆ ವಸತಿ, ಊಟ ಉಪಹಾರ ಹಾಗೂ ಇತರೆ ಸಾಂದರ್ಭಿಕ ವೆಚ್ಚಗಳನ್ನು ಸಂಬಂಧಿಸಿದ ವಿಶ್ವವಿದ್ಯಾಲಯಗಳು ಭರಿಸಬೇಕೆಂದು ಉನ್ನತ ಶಿಕ್ಷಣ ಪರಿಷತ್ ಸೂಚನೆ ನೀಡಿರುತ್ತದೆ. ಕಾರಣ ಈ ಸಾಂದರ್ಭಿಕ ವೆಚ್ಚಗಳಿಗಾಗಿ ಮಾನ್ಯ ಕುಲಪತಿಗಳಿಗೆ ಅಗತ್ಯ ಮುಂಗಡ ಹಣ ನೀಡಿ ನಿಯಮಾನುಸಾರ ಲೆಕ್ಕ ಪತ್ರಗಳನ್ನು ಸಲ್ಲಿಸಲಾಗುವದು.

ಮೇಲಿನ ವಿಷಯವನ್ನು ಸಿಂಡಿಕೇಟ್ ಸಭೆಯ ಮಾಹಿತಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***

ವಿವರಣೆ:

ಮಾನ್ಯ ಕುಲಪತಿಗಳು, ಬ್ರಿಟಿಷ್ ಕೌನ್ಸಿಲ್ ಪ್ರಾಯೋಜಕತ್ವದಲ್ಲಿ, ಉನ್ನತ ಶಿಕ್ಷಣ ಪರಿಷತ್ತಿನ "Furthering Higher Education Partnership: UK and Karnataka" ಕಾರ್ಯಕ್ರಮದ ಭಾಗವಾಗಿ, ಯು.ಕೆ. ದೇಶದ ವಿಶ್ವವಿದ್ಯಾನಿಲಯಗಳ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ, ಶಿಕ್ಷಣ ವ್ಯವಸ್ಥೆ, ಶೈಕ್ಷಣಿಕ ಆಡಳಿತ, ಸಂಶೋಧನೆ, ವಿದ್ಯಾರ್ಥಿ ಕೇಂದ್ರಿತ ಸೌಕರ್ಯಗಳು, ಪಠ್ಯಕ್ರಮ, ಪಠ್ಯೇತರ ಚಟುವಟಿಕೆಗಳು ಇತ್ಯಾದಿಗಳ ಕುರಿತು ಅಧ್ಯಯನಕ್ಕಾಗಿ ಉನ್ನತ ಶಿಕ್ಷಣ ಪರಿಷತ್ತಿನಿಂದ ರಚಿತವಾದ ಕರ್ನಾಟಕ ರಾಜ್ಯ ನಿಯೋಗದ ಸದಸ್ಯರಾಗಿ ಯು.ಕೆ. ದೇಶದ ವಿಶ್ವವಿದ್ಯಾಲಯಗಳ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಲು ಆಯ್ಕೆಯಾಗಿರುವುದನ್ನು ಹಾಗೂ ನಮ್ಮ ವಿಶ್ವವಿದ್ಯಾನಿಲಯ ಯು.ಕೆ. ದೇಶದ ವಿಶ್ವವಿದ್ಯಾಲಯಗಳೊಂದಿಗೆ ಶೈಕ್ಷಣಿಕ ಸಹಯೋಗ ಹೊಂದಲು ಹಾಗೂ ಸಂಶೋಧನೆಗಾಗಿ ರಾಜ್ಯದಿಂದ ಆಯ್ಕೆಯಾಗಿರುವುದನ್ನು ತಿಳಿಸಿ, ಶೈಶವಾಸ್ಥೆಯಲ್ಲಿರುವ ಈ ವಿಶ್ವವಿದ್ಯಾನಿಲಯ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವುದು ದೊಡ್ಡ ಸಾಧನೆ ಹಾಗೂ ಹೆಮ್ಮೆಯ

ವಿಷಯ ಎಂದು ಹೇಳಿ ಸದರಿ ನಿಯೋಗ ದಿನಾಂಕ 28.05.2023 ರಂದು 12 ದಿವಸಗಳ ಅಧ್ಯಯನ ಪ್ರವಾಸ ಕೈಗೊಳ್ಳುತ್ತಿರುವುದಾಗಿ ತಿಳಿಸಿದರು. ಈ ಕುರಿತು ಈಗಾಗಲೇ ಸಿಂಡಿಕೇಟ್ ಸಭೆಗೆ ಮಾಹಿತಿ ನೀಡಿ ಅನುಮೋದನೆ ಪಡೆಯಲಾಗಿದೆ ಎಂದು ಹೇಳಿದರು.

ಯು.ಕೆ. ದೇಶದ ವಿಶ್ವವಿದ್ಯಾನಿಲಯಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ಅಧ್ಯಯನಕ್ಕಾಗಿ ಕರ್ನಾಟಕ ರಾಜ್ಯದ ನಿಯೋಗದ ಸದಸ್ಯರಾಗಿ ಮಾನ್ಯ ಕುಲಪತಿಗಳು ಆಯ್ಕೆಯಾಗಿರುವುದಕ್ಕೆ ಒಟ್ಟಾರೆ ಸಿಂಡಿಕೇಟ್ ಸಭೆ ಸಂತೋಷವನ್ನು ವ್ಯಕ್ತಪಡಿಸಿ ಕುಲಪತಿಗಳಿಗೆ ಅಭಿನಂದನೆಗಳನ್ನು ತಿಳಿಸಿತು. ನಮ್ಮ ವಿಶ್ವವಿದ್ಯಾನಿಲಯವನ್ನು ಯು.ಕೆ. ದೇಶದ ವಿಶ್ವವಿದ್ಯಾಲಯಗಳೊಂದಿಗೆ ಶೈಕ್ಷಣಿಕ ಸಹಯೋಗ ಹಾಗೂ ಸಂಶೋಧನೆಗಾಗಿ ಆಯ್ಕೆಯಾಗಿರುವುದಕ್ಕೆ ಸಿಂಡಿಕೇಟ್ ಸಭೆ ಹರ್ಷ ವ್ಯಕ್ತಪಡಿಸಿ, ಈ ವಿಶ್ವವಿದ್ಯಾಲಯವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗಲು ಆಸಕ್ತಿ ವಹಿಸಿ ಕಾರ್ಯೋನ್ಮುಖರಾಗಿರುವ ಮಾನ್ಯ ಕುಲಪತಿಗಳಿಗೆ ಸಿಂಡಿಕೇಟ್ ಸದಸ್ಯರು ಸರ್ವಾನುಮತದ ಅಭಿನಂದನೆಗಳನ್ನು ಸಲ್ಲಿಸಿದರು. ಇತರ ದೇಶಗಳ ವಿಶ್ವವಿದ್ಯಾಲಯಗಳೊಂದಿಗೂ ಸಹ ಇದೇ ರೀತಿಯ ಸಹಯೋಗಕ್ಕಾಗಿ ಪ್ರಯತ್ನಿಸಬೇಕೆಂದು ಸಲಹೆ ನೀಡಿದರು. ಪ್ರೊ. ಎಂ. ಮುನಿರಾಜುರವರು ಕುಲಪತಿಗಳ ಯು.ಕೆ. ವಿಶ್ವವಿದ್ಯಾನಿಲಯಗಳ ಶೈಕ್ಷಣಿಕ ಭೇಟಿಗಾಗಿ ಆಯ್ಕೆ ಆಗಿರುವುದಕ್ಕೆ ಅಭಿನಂದನೆಗಳನ್ನು ತಿಳಿಸಿ, ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮದ ಅಡಿಯಲ್ಲಿ ಆಯ್ಕೆಯಾಗುವ ನಮ್ಮ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ವಿದೇಶಿ ವಿಶ್ವವಿದ್ಯಾನಿಲಯಗಳಿಗೆ ಆಯ್ಕೆಯಾದಲ್ಲಿ, ವಿದೇಶಿ ವಿನಮಯ ದರದಲ್ಲಿ ಹೆಚ್ಚಿನ ಶುಲ್ಕ ಮತ್ತು ಜೀವನ ನಿರ್ವಹಣೆ ವೆಚ್ಚ ಭರಿಸಬೇಕಾಗುತ್ತದೆ. ಇದಕ್ಕಾಗಿ ಸರ್ಕಾರ ಅಥವಾ ಇತರ ಮೂಲಗಳಿಂದ ಧನಸಹಾಯ/ವಿದ್ಯಾರ್ಥಿ ವೇತನ ನೀಡಲು ಪ್ರಯತ್ನಿಸಬೇಕು ಎಂದು ಹೇಳಿದರು. ಈ ಕುರಿತು ಮುಂಬರುವ ದಿನಗಳಲ್ಲಿ ಪರಿಶೀಲಿಸಲಾಗುವುದು ಎಂದು ಮಾನ್ಯ ಕುಲಪತಿಗಳು ತಿಳಿಸಿದರು.

ಸಿಂಡಿಕೇಟ್ ತೀರ್ಮಾನ:

ಯು.ಕೆ. ದೇಶದ ವಿಶ್ವವಿದ್ಯಾನಿಲಯಗಳ ಅಧ್ಯಯನಕ್ಕಾಗಿ, ಮಾನ್ಯ ಕುಲಪತಿಗಳಾದ ಪ್ರೊ. ಲಿಂಗರಾಜ ಗಾಂಧಿಯವರು, ಕರ್ನಾಟಕ ರಾಜ್ಯದ ನಿಯೋಗದ ಸದಸ್ಯರಾಗಿ ಆಯ್ಕೆಯಾಗಿರುವುದಕ್ಕೆ ಸಿಂಡಿಕೇಟ್ ಸಭೆ ಸಂತೋಷವನ್ನು ವ್ಯಕ್ತಪಡಿಸಿ, ಬೆಂಗಳೂರು ನಗರ ವಿಶ್ವವಿದ್ಯಾನಿಲಯವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವುದಕ್ಕೆ ಕಾರಣರಾದ ಮಾನ್ಯ ಕುಲಪತಿಗಳಿಗೆ ಅಭಿನಂದನೆಗಳನ್ನು ತಿಳಿಸಿತು.

ಪ್ರಸ್ತಾವನೆಯಲ್ಲಿ ನಮೂದಿಸಿದಂತೆ, ನಿಯೋಗದ ಸದಸ್ಯರ ವಿಮಾನಯಾನ, ವೀಸಾ ಪಡೆಯಲು ತಗಲುವ ಶುಲ್ಕ ಹಾಗೂ ಸ್ಥಳೀಯ ಸಾರಿಗೆ ವೆಚ್ಚಗಳನ್ನು ಬ್ರಿಟಿಷ್ ಕೌನ್ಸಿಲ್, ಭರಿಸುವುದನ್ನು ಗಮನಿಸಿ ಧನ್ಯವಾದಗಳನ್ನು ಅರ್ಪಿಸಿತು. ಉಳಿದಂತೆ ವಸತಿ, ಊಟೋಪಚಾರ ನೆನಪಿನ ಕಾಣಿಕೆ ಹಾಗೂ ಇನ್ನಿತರ ಸಾಂದರ್ಭಿಕ ವೆಚ್ಚಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆಯವ್ಯಯದಿಂದ ಭರಿಸಲು ಸಭೆ ಅನುಮೋದನೆ ನೀಡಿತು.

ವಿಷಯ ಸಂಖ್ಯೆ: 02

ವಿಷಯ 2023–24 ನೇ ಶೈಕ್ಷಣಿಕ ಸಾಲಿಗಾಗಿ ಅಸ್ತಿತ್ವದಲ್ಲಿರುವ ಕಾಲೇಜುಗಳ ಹಾಗೂ ಹೊಸದಾಗಿ ಕಾಲೇಜು ಪ್ರಾರಂಭಿಸಲು ಅರ್ಜಿಸಲ್ಲಿಸಿದ ಸಂಸ್ಥೆಗಳ ಪರಿಶೀಲನೆಗಾಗಿ ಸ್ಥಳೀಯ ವಿಚಾರಣೆ ಸಮಿತಿ ರಚಿಸುವ ಕುರಿತು ಹಾಗೂ ವಿವಿಧ ಸ್ನಾತಕ ಕೋರ್ಸುಗಳ ಪ್ರವೇಶಕ್ಕೆ ನಿಗದಿಪಡಿಸಿದ ಶುಲ್ಕವನ್ನು ಹಾಗೂ ಸಂಯೋಜನೆಯ ಶುಲ್ಕವನ್ನು 10% ಹೆಚ್ಚಿಸಿ ಅಧಿಸೂಚನೆ ಪ್ರಕಟಿಸಿರುವ ಕ್ರಮದ ಅನುಸಮರ್ಥನೆ ಕುರಿತು

***<u>ಪರಾಮರ್ಶಕ ಟಿಪ್ಪಣಿ:</u>***

2023–24ನೇ ಶೈಕ್ಷಣಿಕ ಸಾಲಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ 13 ವಿಧಾನಸಭಾ ಕ್ಷೇತ್ರಗಳಾದ, ಬಸವನಗುಡಿ, ಬಿ.ಟಿ.ಎಂ ಲೇಔಟ್, ಬ್ಯಾಟರಾಯನಪುರ, ಚಿಕ್ಕಪೇಟ್, ಗಾಂಧಿನಗರ, ಚಾಮರಾಜಪೇಟೆ, ಹೆಬ್ಬಾಳ, ಜಯನಗರ, ಮಲ್ಲೇಶ್ವರ, ರಾಜಾಜಿನಗರ, ಶಾಂತಿನಗರ, ಶಿವಾಜಿನಗರ ಮತ್ತು ಯಲಹಂಕ ಕ್ಷೇತ್ರಗಳ ಸಂಯೋಜಿತ ಕಾಲೇಜುಗಳ ಹಾಗೂ ಆರ್ಹಶಿಕ್ಷಣ ಸಂಸ್ಥೆಗಳಿಂದ ವಿವಿಧ ಸ್ನಾತಕ/ಸ್ನಾತಕೋತ್ತರ ಹಾಗೂ ಬಿ.ಇಡಿ/ಎಂ.ಇಡಿ/ಬಿ.ಪಿ.ಇಡಿ ಕೋರ್ಸುಗಳು ವಾರ್ಷಿಕ ಸಂಯೋಜನೆಗೆ ಸಂಬಂಧಿಸಿದಂತೆ, a)ಅಸ್ತಿತ್ವದಲ್ಲಿರುವ ಕಾಲೇಜುಗಳಿಗೆ ಸಂಯೋಜನೆ ನವೀಕರಣ b)ಹೊಸ ಕೋರ್ಸುಗಳು/ಹೊಸ ವಿಷಯಗಳನ್ನು ಪ್ರಾರಂಭಿಸುವುದು, c)ಪ್ರವೇಶ ಸಂಖ್ಯೆಗಳನ್ನು ಹೆಚ್ಚಿಸುವುದು/ಕಡಿಮೆಗೊಳಿಸುವುದು, d) ಕಾಲೇಜಿನ ಹೆಸರು ಮತ್ತು ವಿಳಾಸದ ಬದಲಾವಣೆ, e) ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆ ನವೀಕರಣ, f) ಹೊಸ ಕಾಲೇಜುಗಳನ್ನು ಪ್ರಾರಂಭಿಸಲು, g)ಹಾಲಿ ಇರುವ ಕಾಲೇಜುಗಳಲ್ಲಿ ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು h) ಹಾಲಿ ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳ ನವೀಕರಣ ಹೊಸದಾಗಿ ಶಾಶ್ವತ ಸಂಯೋಜನೆ ಕೋರಿರುವ ಕೋರ್ಸು/ಕಾಲೇಜುಗಳಿಗೆ ಹೊಸ ಶಾಶ್ವತ ಸಂಯೋಜನೆ ನೀಡುವ ಕುರಿತಂತೆ ಸಂಯೋಜನೆ ಪ್ರಕ್ರಿಯೆಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 59 ಸರ್ಕಾರದ ಆದೇಶದ ಅನ್ವಯ ಆನ್‌ಲೈನ್‌ನಲ್ಲಿ ಸರ್ಕಾರ ಸಿದ್ಧಪಡಿಸಿರುವ UUCMS Portal ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ 24.04.2023 ರಂದು ಅಧಿಸೂಚನೆ ಹೊರಡಿಸಲಾಗಿದೆ. ಅರ್ಜಿಗಳನ್ನು ಸಲ್ಲಿಸಲು ದಿನಾಂಕ 31.05.2023 ರವರೆಗೆ ಅವಕಾಶ ಕಲ್ಪಿಸಲಾಗಿದೆ.

2022–23ರ ಸಾಲಿನಲ್ಲಿ ನಿಗದಿಪಡಿಸಲಾದ ಸಂಯೋಜನಾ ಶುಲ್ಕ, ವಿವಿಧ ಸ್ನಾತಕ ಕೋರ್ಸುಗಳ ಪ್ರವೇಶಕ್ಕೆ ನಿಗದಿಪಡಿಸಿದ ಶುಲ್ಕಗಳಿಗೆ ಶೇಕಡಾ 10% ರಷ್ಟು ಹೆಚ್ಚಿಸಿ 2023–24ನೇ ಸಾಲಿಗೆ ಶುಲ್ಕವನ್ನು ನಿಗದಿಪಡಿಸಿ ದಿನಾಂಕ 30.03.2023, 03.05.2023 ಹಾಗೂ 15.05.2023 ರಂದು ಅಧಿಸೂಚನೆಗಳನ್ನು ಹೊರಡಿಸಲಾಗಿದೆ.

ಕರ್ನಾಟಕ ಸರ್ಕಾರದ ಹೊರಡಿಸಿದ ಸುತ್ತೋಲೆ ಸಂ ಇಡಿ 94 ಯುಜಿವಿ 2022 ದಿನಾಂಕ 24.11.2022ರಲ್ಲಿ, ಸಾಮಾಜಿಕ ಮತ್ತು ನೈಸರ್ಗಿಕ ನ್ಯಾಯದ ಪರಿಪಾಲನೆಯೊಂದಿಗೆ ಶೈಕ್ಷಣಿಕ ಹಿರಿಮೆಯನ್ನು ಸಾಧಿಸಲು ಹಾಗೂ ಶಿಕ್ಷಣ ಗುಣಮಟ್ಟವನ್ನು ವೃದ್ಧಿಸಲು ಅವಶ್ಯಕವಾದ ನ್ಯಾಯೋಚಿತ, ಪಾರದರ್ಶಕ ಹಾಗೂ ನಿಷ್ಪಕ್ಷಪಾತ ಸಂಯೋಜನೆ ಪ್ರಕ್ರಿಯೆ ರೂಪಿಸಬೇಕಾದಲ್ಲಿ ಸ್ಥಳೀಯ ವಿಚರಣಾ ಸಮಿತಿಗಳಿಗೆ ವಿಷಯ ಪಾರಂಗತರನ್ನು ಹಾಗೂ ಶೈಕ್ಷಣಿಕ ತಜ್ಞರನ್ನು ನೇಮಿಸುವ ಅವಶ್ಯಕತೆಯನ್ನು ಮನಗಂಡು ರಾಜ್ಯದ ವಿಶ್ವವಿದ್ಯಾಲಯಗಳ ಸ್ಥಳೀಯ ವಿಚಾರಣೆ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ಸದಸ್ಯ/ಅಧ್ಯಕ್ಷರನ್ನಾಗಿ ನೇಮಿಸದೇ ಕೇವಲ ವಿಷಯ ಪರಿಣಿತರನ್ನು/ಶಿಕ್ಷಣ ತಜ್ಞರನ್ನು ನೇಮಿಸಲು ಸೂಚಿಸಿ, ಸಿಂಡಿಕೇಟ್ ಸದಸ್ಯರನ್ನು ಸ್ಥಳೀಯ ಪರಿಶೀಲನಾ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸದಿರಲು ವಿಶ್ವವಿದ್ಯಾಲಯಕ್ಕೆ ಸೂಚಿಸಲಾಗಿದೆ.

ಮೇಲೆ ತಿಳಿಸಿದ ಸರ್ಕಾರದ ಸುತ್ತೋಲೆಯ ವಿರುದ್ಧ ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ಎಂ.ವಿ. ರಂಗಪ್ಪನವರು ಹಾಗೂ ಇತರ ಮೂರು ಅರ್ಜಿದಾರರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ. 5645/2023 (GM-RES) ಸಲ್ಲಿಸಿ ಮೇಲೆ ತಿಳಿಸಿದ ಸರ್ಕಾರದ ಸುತ್ತೋಲೆಯ ಮುಂದುವರೆಸದಿರಲು ಆದೇಶ ನೀಡಿರುತ್ತದೆ. (… subject to the filing of statement of objections, by the first respondent, the State shall not precipitate the matter qua circular dated 24.11.2022, till the next date of hearing)

ಮೇಲೆ ನಮೂದಿಸಿದ ಪ್ರಸ್ತಾವನೆಯ ಹಿನ್ನಲೆಯಲ್ಲಿ, (ಅ) ಕರ್ನಾಟಕ ಉಚ್ಚ ನ್ಯಾಯಾಲಯದ ಮೇಲೆ ತಿಳಿಸಿದ ಆದೇಶದ ಹಿನ್ನೆಲೆಯಲ್ಲಿ 2023-24ನೇ ಸಾಲಿಗೆ ಅಗತ್ಯ ಸಂಖ್ಯೆಯ ಸ್ಥಳೀಯ ವಿಚಾರಣೆ ಸಮಿತಿಗಳನ್ನು ರಚಿಸಲು ಹಾಗೂ (ಆ) 2022-23ನೇ ಸಾಲಿನ ಸಂಯೋಜನೆ ಶುಲ್ಕ ಮತ್ತು ವಿವಿಧ ವ್ಯಾಸಂಗಗಳ ಪ್ರವೇಶಾತಿ ಶುಲ್ಕಗಳಿಗೆ ಶುಲ್ಕಕ್ಕೆ ಶೇಕಡಾ 10% ರಷ್ಟು ಮೊತ್ತವನ್ನು ಹೆಚ್ಚಿಸಿ ಅಧಿಸೂಚನೆಗಳನ್ನು ಹೊರಡಿಸಿದ ಕ್ರಮದ ಅನುಮೋದನೆಗಾಗಿ ವಿಷಯವನ್ನು ಸಿಂಡಿಕೇಟ್ ಸಭೆಗೆ ಮಂಡಿಸಲಾಗಿದೆ.

***

<u>ವಿವರಣೆ:</u>

ಸದಸ್ಯರಾದ ಶ್ರೀ ರಂಗಪ್ಪ ನವರು, ಸರ್ಕಾರದ ಆದೇಶಕ್ಕೆ ತಡೆ ಆಜ್ಞೆ ಇರುವುದರಿಂದ ಹಿಂದಿನ ವರ್ಷಗಳಲ್ಲಿ ಪಾಲಿಸಿಕೊಂಡು ಬಂದ ವಾಡಿಕೆಯಂತೆ ಈ ವರ್ಷವೂ ಸಹ ಸಿಂಡಿಕೇಟ್ ಸದಸ್ಯ ಅಧ್ಯಕ್ಷತೆಯಲ್ಲಿ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಬೇಕೆಂದು ತಿಳಿಸಿದರು. ಸದಸ್ಯರಾದ ಶ್ರೀ ಸಮರ್ಥ ಮುನಿರಾಜು ರವರು, ಸರ್ಕಾರದ ಆದೇಶದ ಮೇಲೆ ತಡಿ ಆಜ್ಞೆ ಇರುವುದರಿಂದ ನ್ಯಾಯಾಲಯದ ಆದೇಶವಾಗುವವರೆಗೆ ತಡೆ ಆಜ್ಞೆ ಊರ್ಜಿತದಲ್ಲಿರುತ್ತದೆ ಎಂದು ತಿಳಿಸಿದರು.

ಸಿಂಡಿಕೇಟ್ ತೀರ್ಮಾನ:

2023-24ನೇ ಸಾಲಿಗಾಗಿ ಅಸ್ತಿತ್ವದಲ್ಲಿರುವ ಕಾಲೇಜುಗಳ, ಹೊಸದಾಗಿ ಅರ್ಜಿ ಸಲ್ಲಿಸುವ ಕಾಲೇಜುಗಳ ಹಾಗೂ ಹೊಸ ಕೋರ್ಸು, ವಿಷಯ, ಪ್ರವೇಶ ಸಂಖ್ಯೆಗಳಲ್ಲಿ ಬದಲಾವಣೆ, ಸ್ಥಳ/ವಿಳಾಸ ಬದಲಾವಣೆ ಇತ್ಯಾದಿಗಳಿಗಾಗಿ ಅರ್ಜಿಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಸ್ವೀಕೃತವಾಗುವ ಕಾಲೇಜುಗಳ ಮತ್ತು ಸಂಸ್ಥೆಗಳ ಅರ್ಜಿಗಳನ್ನು ವಿವಿಧ ವರ್ಗಗಳಲ್ಲಿ ವಿಂಗಡಿಸಿ ಅದಕ್ಕನುಗುಣವಾಗಿ, ಅಗತ್ಯ ಸಂಖ್ಯೆಯ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸ ಬೇಕಾಗುತ್ತದೆ. ಈ ಕುರಿತು ರಾಜ್ಯ ಸರ್ಕಾರ ಹೊರಡಿಸುವ ಆದೇಶಗಳನ್ನು ಮತ್ತು ಕರ್ನಾಟಕ ಉಚ್ಚನ್ಯಾಯಾಲಯ ಕಾಲಕಾಲಕ್ಕೆ ನೀಡುವ ತೀರ್ಪುಗಳನ್ನು ಅನುಸರಿಸಿ, ಅರ್ಜಿಗಳನ್ನು ಸಲ್ಲಿಸಲು ನಿಗದಿತ ಕೊನೆಯ ದಿನಾಂಕದ ನಂತರ ಸ್ವೀಕೃತವಾಗುವ ಅರ್ಜಿಗಳಿಗೆ ಅನುಗುಣವಾಗಿ ಅಗತ್ಯ ಸಂಖ್ಯೆಯ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ಸಿಂಡಿಕೇಟ್ ಸಭೆ ನಿರ್ಣಯಿಸಿತು.

ವಿಷಯ ಸಂಖ್ಯೆ– 3

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪರೀಕ್ಷೆಗಳಿಗೆ ಬೇಕಾಗುವ ಅಂಕಪಟ್ಟಿ ಖರೀದಿಸುವ ಬಗ್ಗೆ.

*ಪರಮಾರ್ಶಕ ಟಿಪ್ಪಣಿ:*

NEP ಬರುವ ಮೊದಲು ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಲು ಟೆಂಡರ್ ಪಡೆದಿರುವ ಸಂಸ್ಥೆಯು, ಟೆಂಡರ್‌ನಲ್ಲಿನ ಕರಾರಿನಂತೆ ಹೊರಗುತ್ತಿಗೆ ಪಡೆದಿರುವ ಸಂಸ್ಥೆ ಅಂಕಪಟ್ಟಿಗಳನ್ನು ಖರೀದಿಸಿ ಕೊಡುತ್ತಿತ್ತು. NEP ಬಂದ ನಂತರ ಪರೀಕ್ಷೆಗಳು ಮೌಲ್ಯಮಾಪನ, ಫಲಿತಾಂಶ ಪ್ರಕಟಣೆಗಳನ್ನು ವಿಶ್ವವಿದ್ಯಾಲಯವೇ UUCMS ಪೋರ್ಟಲ್ ಮೂಲಕ ಮಾಡುತ್ತಿರುವುದರಿಂದ, ಅಂಕಪಟ್ಟಿಗಳನ್ನು ಖರೀದಿಸಿ, ಮುದ್ರಿಸಿ ವಿದ್ಯಾರ್ಥಿಗಳಿಗೆ ವಿತರಿಸಬೇಕಾಗಿದೆ. ಇಲ್ಲಿಯವರೆಗೆ, NEP ಅಡಿಯಲ್ಲಿ 1 ಮತ್ತು 2ನೇ ಸೆಮಿಸ್ಟರ್ ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ.

ಸದ್ಯದಲ್ಲಿಯೇ 1 ಮತ್ತು 3ನೇ ಸೆಮಿಸ್ಟರ್ ಪರೀಕ್ಷೆಗಳು ಪ್ರಾರಂಭವಾಗಲಿದ್ದು, ಎಲ್ಲಾ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ಮುದ್ರಿಸಿ ವಿತರಿಸಬೇಕಾಗುತ್ತದೆ. ಒಂದು ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳಿಗೆ ಸುಮಾರು 45,000 ಅಂಕಪಟ್ಟಿಗಳು ಬೇಕಾಗಬಹುದು ಅದರಂತೆ ಈಗ ನಡೆದಿರುವ ಪರೀಕ್ಷೆಗಳು ಮತ್ತು ಈಗ ನಡೆಯುತ್ತಿರುವ /ನಡೆಯಲಿರುವ ಪರೀಕ್ಷೆಗಳಿಗೆ ಒಟ್ಟು 1,80,000 ಖಾಲಿ ಅಂಕಪಟ್ಟಿಗಳು ಬೇಕಾಗುತ್ತವೆ. ಆದರೆ ಅಂಕಪಟ್ಟಿ ತಿದ್ದುಪಡಿ ಮತ್ತು ಮುಂದೆ ನಡೆಯುವ ಪರೀಕ್ಷೆಗಳಿಗೆ ಬೇಕಾಗುವ ಅಂಕಪಟ್ಟಿಗಳನ್ನು ಗಮನದಲ್ಲಿರಿಸಿ ಸುಮಾರು 5.00 ಲಕ್ಷ ಅಂಕಪಟ್ಟಿ ಖರೀದಿಸಲು ಪ್ರಸ್ತಾವನೆ ಸಲ್ಲಿಸಿದೆ. MSIL ಸಂಸ್ಥೆಯಿಂದ ಖರೀದಿಸಿದರೆ ಸುಮಾರು ರೂ.39.00/– + ತೆರಿಗೆ ಪ್ರತಿ ಅಂಕಪಟ್ಟಿಗೆ ವೆಚ್ಚವಾಗಲಿದ್ದು, ಅಂಕಪಟ್ಟಿ ಖರೀದಿಸಲು MSIL ಸಂಸ್ಥೆಗೆ ಸರ್ಕಾರ KTTP ಕಾಯ್ದೆ 4(g) ವಿನಾಯಿತಿ ನೀಡಿದೆ. ಆದುದರಿಂದ ಸರ್ಕಾರ

ನೀಡಿರುವ ನಿರ್ದೇಶನದಂತೆ ಅಂಕಪಟ್ಟಿಗಳನ್ನು MSIL ಸಂಸ್ಥೆಯಿಂದ ಖರೀದಿಸಲು ಅನುಮೋದನೆ ಕೋರಿ ಸಿಂಡಿಕೇಟಿನ ಮುಂದೆ ನಿರ್ಣಯಕ್ಕಾಗಿ ಮಂಡಿಸಿದೆ.

**ಸಿಂಡಿಕೇಟ್ ತೀರ್ಮಾನ:**

**ಪರೀಕ್ಷಾ ವಿಭಾಗಕ್ಕೆ ಅಗತ್ಯವಾದ ಅಂಕಪಟ್ಟಿಗಳ ಗುಣಮಟ್ಟ, ಸೆಕ್ಯುರಿಟಿ ಫೀಚರ್ಸ್ ಪರಿಶೀಲಿಸಲು ರಚಿಸಲಾದ ಸಮಿತಿಯ ವರದಿಯ ಹಾಗೂ ಶಿಫಾರಸ್ಸುಗಳನ್ನು ಅನುಮೋದಿಸಲಾಯಿತು. ಕೆ.ಟಿ.ಪಿ.ಪಿ. ನಿಯಮದ ಪ್ರಕಾರ ವಿಧಿವಿಧಾನಗಳನ್ನು ಅನುಸರಿಸಿ ಅಗತ್ಯ ಸಂಖ್ಯೆಯ ಅಂಕಪಟ್ಟಿಗಳನ್ನು ಖರೀದಿಸಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.**

ಕುಲಸಚಿವರು (ಮೌಲ್ಯಮಾಪನ) ರವರಿಂದ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು | ಕುಲಪತಿಗಳು |
| ಸದಸ್ಯಕಾರ್ಯದರ್ಶಿಗಳು | ಸಭಾಧ್ಯಕ್ಷರು |

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು